**ಸಾಕ್ಷಿಯನ್ನು ದಿನಾಂಕ 14.10.2024 ರಂದು ಕರೆದು ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ಶ್ರೀ ಜಿಎಂಐ ವಕೀಲರಿಂದಃ**

4. ಪ್ರತಿವಾದಿಯನ್ನು ಕೊಡದವಾಡಿಯ ಚನ್ನಕೃಷ್ಣಪ್ಪರವರಿಗೆ ಮದುವೆ ಮಾಡಿ ಕೊಡಲಾಗಿತ್ತು ಎಂದರೆ ಸರಿ. ವಾದಿಯರನ್ನು ಕಡಸೇನಹಳ್ಳಿ ಮತ್ತು ಬಂಡಪಲ್ಲಿ ಗ್ರಾಮಗಳಿಗೆ ಮದುವೆ ಮಾಡಿಕೊಡಲಾಗಿತ್ತು ಎಂದರೆ ಸರಿ. ವಾದಿಯರ ತಂದೆಗೆ ಒಬ್ಬ ಗಂಡು ಮಗ ಇದ್ದ ಎಂದರೆ ಸರಿ, ಸಾಕ್ಷಿ ಸ್ವತಃ ಅತ ಮೃತ ಪಟ್ಟಿದ್ದಾನೆಂದು ನುಡಿಯುತ್ತಾರೆ. ಅತನ ಹೆಸರು ದೇವಪ್ಪ. ದೇವಪ್ಪ ಮೃತ ಪಟ್ಟು 5 ವರ್ಷ ಕಳೆದಿದೆ. ದೇವಪ್ಪನವರಿಗೆ ಮದುವೆಯಾಗಿತ್ತು. ಅತನಿಗೆ ಒಂದು ಹೆಣ್ಣು ಮಗು ಇದೆ ಎಂದರೆ ಸರಿ. ದೇವಪ್ಪನ ಹೆಂಡತಿ ಮತ್ತು ಮಗಳು 22 ವರ್ಷಗಳಿಂದ ಮನೆಯಲ್ಲಿ ಇಲ್ಲ, ಎಲ್ಲಿ ಹೋಗಿದ್ದಾರೆಂದು ನನಗೆ ಗೊತ್ತಿಲ್ಲ. ದೇವಪ್ಪನ ಮಗಳ ಹೆಸರು ನನಗೆ ಗೊತ್ತಿಲ್ಲ. ಇಲ್ಲಿಯವರೆಗೂ ನಾನು ದೇವಪ್ಪನ ಹೆಂಡತಿ ಮತ್ತು ಮಗಳ ಹೆಸರನ್ನು ತಿಳಿದುಕೊಳ್ಳಲು ಪ್ರಯತ್ನಿಸಲಿಲ್ಲ.

5. ಪ್ರತಿವಾದ ಪತ್ರದಲ್ಲಿ ಪ್ರತಿವಾದಿ ದೇವಪ್ಪನ ಹೆಂಡತಿ ಮತ್ತು ಮಗಳ ಹೆಸರನ್ನು ಹೇಳಿದ್ದಾರೋ ಇಲ್ಲವೋ ಎಂದು ನಾನು ತಿಳಿದುಕೊಂಡಿಲ್ಲ. ಪ್ರತಿವಾದಿ ಸಲ್ಲಿಸಿರುವ ಪ್ರತಿವಾದ ಪತ್ರದಲ್ಲಿ ಏನು ಹೇಳಿದ್ದಾರೆಂದು ನಾನು ತಿಳಿದುಕೊಂಡಿಲ್ಲ. ದೇವಪ್ಪನ ಹೆಂಡತಿ ಹೆಸರು ರತ್ನಮ್ಮ, ಮಗಳ ಹೆಸರು ರೋಜಾ ಎಂದರೆ ನನಗೆ ಗೊತ್ತಿಲ್ಲ. ದೇವಪ್ಪನವರು ತಮ್ಮ ಜೀವಿತಾವಧಿಯಲ್ಲಿ ಅರೋಗ್ಯವಾಗಿದ್ದರು. ದೇವಪ್ಪ ದೈಹಿಕವಾಗಿ

ಮತ್ತು ಮಾನಸಿಕವಾಗಿ ಚೆನ್ನಾಗಿರಲಿಲ್ಲ ಎಂದರೆ ಸುಳ್ಳು. ದೇವಪ್ಪನ ಅರೋಗ್ಯ ಸ್ಥಿತಿ ಅ ರೀತಿ ಇದ್ದ ಕಾರಣವೇ ಅತನ ಹೆಂಡತಿ ಮಗಳನ್ನು ಕರೆದುಕೊಂಡು ಹೊರಟು ಹೋಗಿದ್ದಳು ಎಂದರೆ ಸುಳ್ಳು. ಸಾಕ್ಷಿ ಸ್ವತಃ ಪ್ರತಿವಾದಿಯೇ ಅವರನ್ನು ಒಡಿಸಿದ್ದರು ಎಂದು ನುಡಿಯುತ್ತಾರೆ. ಜಮೀನನ್ನು ತಮ್ಮ ಹೆಸರಿಗೆ ಮಾಡಿಕೊಳ್ಳಲು ಅವರನ್ನು ಒಡಿಸಿದ್ದರು. ರತ್ನಮ್ಮ ಮತ್ತು ರೋಜಾ ಎಲ್ಲಿ ವಾಸವಿದ್ದಾರೆಂದು ಹುಡುಕಲು ನಾವು ಪ್ರಯತ್ನಿಸಿಲ್ಲ, ನಮ್ಮ ತಾತ ಮತ್ತು ನಮ್ಮ ಅಜ್ಜಿ ತೀರಿಕೊಂಡಾಗಲೂ ಅವರು ಬಂದಿಲ್ಲ. ಸಾಕ್ಷಿ ಸ್ವತಃ ನಮ್ಮ ಮಾವ ದೇವಪ್ಪನವರು ತೀರಿಕೊಂಡಾಗ ಅವರು ಬಂದಿದ್ದರು ಎಂದು ನುಡಿಯುತ್ತಾರೆ.

6. ರತ್ನಮ್ಮ ಮತ್ತು ರೋಜಾರವರು ದೇವಪ್ಪ ತೀರಿಕೊಂಡಾಗ ಬಂದಾಗ ಅವರು ಎಲ್ಲಿ ಇದ್ದಾರೆ ಮತ್ತು ಏನು ಮಾಡುತ್ತಿದ್ದಾರೆಂದು ನಾವು ವಿಚಾರಿಸಲಿಲ್ಲ. ದೇವಪ್ಪನ ಮಗಳು ರೋಜಾಗೆ ಮದುವೆಯಾಗಿಲ್ಲ ಎಂದರೆ ನನಗೆ ಗೊತ್ತಿಲ್ಲ. ದೇವಪ್ಪನಿಗೆ ದುಡಿಯುವ ಶಕ್ತಿ ಇರಲಿಲ್ಲ, ಮದುವೆಯಾದ 2 ರಿಂದ 3 ವರ್ಷದಲ್ಲಿ ಅತನ ಅರೋಗ್ಯ ಹದಗೆಟ್ಟಿತ್ತು ಎಂದರೆ ಸರಿಯಲ್ಲ. ಪ್ರತಿವಾದಿ ಅದೇ ಗ್ರಾಮದಲ್ಲಿ ಇದ್ದ ಕಾರಣ ಅಕೆಯ ತಂದೆ ತಾಯಿಯರನ್ನು ನೋಡಿಕೊಳ್ಳುತ್ತಿದ್ದರು ಎಂದರೆ ಸಾಕ್ಷಿ 3 ಜನರು ನೋಡಿಕೊಳ್ಳುತ್ತಿದ್ದರು ಎಂದು ನುಡಿಯುತ್ತಾರೆ. ವಾದಿಯರ ತಂದೆಗೆ ರೇಷನ್ ಕಾರ್ಡ್ ಇತ್ತು. ರೇಷನ್ ಕಾರ್ಡ್ ನಲ್ಲಿ ಮುನಿವೆಂಕಟಪ್ಪ, ವೆಂಕಟಮ್ಮ ಮತ್ತು ದೇವಪ್ಪನವರ ಹೆಸರು ಇತ್ತು.

7. ದಾವಾ ಐಟಂ ನಂ 1 ರಲ್ಲಿ ನನ್ನ ತಾತ ಮುನಿವೆಂಕಟಪ್ಪನಿಗೆ 1/3 ಭಾಗ ಇತ್ತು ಎಂದರೆ ಸರಿ. ದಾವಾ ಐಟಂ ನಂ 1 ರ ಪಹಣಿಯಲ್ಲಿ ಮುನಿವೆಂಕಟಪ್ಪನ ಹೆಸರಿಗೆ 1 ಭಾಗ ಬರುತ್ತಿದೆ, ಅದರಲ್ಲಿ 3 ಗುಂಟೆಯನ್ನು ಪ್ರತಿವಾದಿಯ ಹೆಸರಿಗೆ ಮಾಡಿಕೊಟ್ಟಿದ್ದಾರೆಂದು ಬರುತ್ತಿದೆ. ದಾವಾ ಐಟಂ 1 ರ ಪಹಣಿಯಲ್ಲಿ ಮುನಿವೆಂಕಟಪ್ಪ, ಚಿಕ್ಕನಾರೆಪ್ಪ ಮತ್ತು ಲಗುಮರೆಡ್ಡಿ ರವರ ಹೆಸರು ಬರುತ್ತಿದೆ ಎಂದರೆ ಸರಿ. ಲಗುಮರೆಡ್ಡಿ ಮುನಿವೆಂಕಟಪ್ಪನ ಅಣ್ಣನ ಮಗ. ಮುನಿವೆಂಕಟಪ್ಪ, ಅತನ ಸಹೋದರರಾದ ಚಿಕ್ಕನಾರೆಪ್ಪ ಮತ್ತು ದೊಡ್ಡನಾರೆಪ್ಪ ವಿಭಾಗ ಮಾಡಿಕೊಂಡ ದಾಖಲೆಯ ಬಗ್ಗೆ ನನಗೆ ಗೊತ್ತಿಲ್ಲ.

8. ಸರ್ವೆ ನಂ 4/1 ರಲ್ಲಿ ಮೂರುವರೆ ಗುಂಟೆ ಲಗುಮರೆಡ್ಡಿರವರ ಹೆಸರಿಗೆ ಯಾವ ದಾಖಲೆಯ ಆಧಾರದ ಮೇಲೆ ಬರುತ್ತಿದೆ ಎಂದು ನನಗೆ ಗೊತ್ತಿಲ್ಲ. ಸರ್ವೆ ನಂ 4/1 ರಲ್ಲಿ ಎಷ್ಟು ವಿಸ್ತೀರ್ಣ ಇದೆ ಎಂದು ನನಗೆ ಗೊತ್ತಿಲ್ಲ. ಸರ್ವೆ ನಂ 4/1 ರಲ್ಲಿ ಮುನಿಸ್ವಾಮಿ, ಮುನಿವೆಂಕಟಪ್ಪ ಮತ್ತು ಚಿಕ್ಕನಾರೆಪ್ಪನವರಿಗೆ ಒಂದು ಎಕರೆ ಒಂಭತ್ತುವರೆ ಗುಂಟೆ ಜಮೀನು ಇದೆ ಎಂದರೆ ಸರಿ. ಆ ಜಮೀನು ಈಗಲೂ ಅವರ ಹೆಸರಿಗೆ ಜಂಟಿಯಾಗಿ ಬರುತ್ತಿದೆ ಎಂದರೆ ಸರಿ. ಅವರುಗಳು ಭಾಗವನ್ನು ಮಾಡಿಕೊಂಡಿಲ್ಲ.

9. ದಾವಾ ಐಟಂ ನಂ 2 ಅನ್ನು ಪ್ರತಿವಾದಿಗೆ ಅಕೆಯ ತಂದೆ ಮುನಿವೆಂಕಟಪ್ಪ ದಿಃ 15.09.2008 ರಂದು ವಿಲ್ ನಾಮೆಯ ಮೂಲಕ ನೀಡಿದ್ದಾರೆಂದರೆ ಸುಳ್ಳು, ಸಾಕ್ಷಿ ಸ್ವತಃ ವೃದ್ಧಾಪ್ಯ ವೇತನ ಮಾಡಿಸುತ್ತೇವೆಂದು ದಾಖಲೆಯನ್ನು ಸೃಷ್ಟಿಸಿದ್ದಾರೆಂದು

ನುಡಿಯುತ್ತಾರೆ. ಆ ವಿಲ್ ನಾಮೆಯನ್ನು ನೋಡಿಲ್ಲ. ಆ ವಿಲ್ ನಾಮೆಯ ವಿಚಾರ ನಮ್ಮ ತಾತ ಮೃತ ಪಟ್ಟ ಬಳಿಕ ನಮಗೆ ತಿಳಿಯಿತು. ನನ್ನ ತಾತ ಬದುಕಿದ್ದಾಗ ಆ ವಿಲ್ ನಾಮೆಯ ಬಗ್ಗೆ ಅಗಲೀ ತನಗೆ ಮೋಸ ಅಗಿದೆ ಎಂದು ಹೇಳಲಿಲ್ಲ. ಆ ವಿಲ್ ನಾಮೆಗೆ ಯಾರು ಸಾಕ್ಷಿ ಹಾಕಿದ್ದಾರೆಂದು ನನಗೆ ಗೊತ್ತಿಲ್ಲ. ಆ ವಿಲ್ ನಾಮೆಯನ್ನು ನಮ್ಮ ತಾತ ತೀರಿಕೊಂಡ ಬಳಿಕ ಪ್ರತಿವಾದಿ ನನಗೆ ವಿಲ್ ನಾಮೆ ಅಗಿದೆಯೆಂದು ತಿಳಿಸಿದ ಬಳಿಕ ನೋಡಿದ್ದೇನೆ.

10. ಪ್ರತಿವಾದಿ ಆ ವಿಚಾರವನ್ನು ತಿಳಿಸಿದ ಬಳಿಕ ಆ ದಾಖಲೆಯನ್ನು ನಾನು ಪಡೆದುಕೊಂಡು ನೋಡಲಿಲ್ಲ, ಅವರು ನನಗೆ ತೋರಿಸಿದ್ದರು ಕೊಡಲಿಲ್ಲ. ನಮ್ಮ ತಾತ ಮುನಿವೆಂಕಟಪ್ಪ ತೀರಿಕೊಂಡು ಇಂದಿಗೆ 5 ವರ್ಷ ಕಳೆದಿದೆ. ನನ್ನ ಅಜ್ಜಿ ವೆಂಕಟಮ್ಮ ತೀರಿಕೊಂಡು ಇಂದಿಗೆ 4 ವರ್ಷ ಕಳೆದಿದೆ. ದೇವಪ್ಪ ತೀರಿಕೊಂಡು ಇಂದಿಗೆ 3 ವರ್ಷ ಕಳೆದಿದೆ. ಅವರುಗಳ ಮರಣ ಪ್ರಮಾಣ ಪತ್ರವನ್ನು ಪಡೆದಿದ್ದೇನೆ. ಆ ಮರಣ ಪ್ರಮಾಣ ಪತ್ರಗಳನ್ನು ನ್ಯಾಯಾಲಯಕ್ಕೆ ಹಾಜರು ಮಾಡಿದ್ದೇನೆ. ನಾನು ಆ 3 ಜನರ ಮರಣ ಪ್ರಮಾಣ ಪತ್ರಗಳನ್ನು ನ್ಯಾಯಾಲಯಕ್ಕೆ ಹಾಜರು ಮಾಡಿಲ್ಲ ಎಂದರೆ ಸರಿಯಲ್ಲ.

11. ದಾವಾ ಐಟಂ ನಂ 3 ಸರ್ವೆ ನಂ 76 ಅನ್ನು ಸರ್ಕಾರದಿಂದ ಮುನಿವೆಂಕಟಪ್ಪನವರಿಗೆ ಮಂಜೂರು ಮಾಡಲಾಗಿತ್ತು. ನಮ್ಮ ತಾಯಿಯವರು ಒಟ್ಟಿಗೆ ವಾಸವಾಗಿದ್ದಾಗ ಆ ಅಸ್ತಿಯನ್ನು ಮಂಜೂರು ಮಾಡಲಾಗಿತ್ತು. ಆ ಅಸ್ತಿಯನ್ನು ಮಂಜೂರು ಮಾಡಿದ ದಿನಾಂಕ ನನಗೆ ಗೊತ್ತಿಲ್ಲ, ನಾನು ಜನಿಸುವ ಮೊದಲೇ ಅ

ಜಮೀನು ಮಂಜೂರಾಗಿತ್ತು. ಈ ದಾವೆಯನ್ನು ದಾಖಲಿಸುವ ಕಾಲಕ್ಕೆ ಅ ಅಸ್ತಿ ಯಾವಾಗ ಮಂಜೂರಾಗಿತ್ತೆಂದು ನಾನು ಕಂದಾಯ ಇಲಾಖೆಯಲ್ಲಿ ವಿಚಾರಿಸಿ ದಾಖಲೆಯನ್ನು ಪಡೆದುಕೊಂಡಿಲ್ಲ. ವಾದಿಯರು ಮತ್ತು ಪ್ರತಿವಾದಿ ಯಾವ ವರ್ಷದಂದು ಜನಿಸಿದ್ದರು ಎಂದು ನನಗೆ ಗೊತ್ತಿಲ್ಲ. ವಾದಿಯರು ಯಾವ ವರ್ಷದಂದು ಮದುವೆಯಾಗಿದ್ದರು ಎಂದು ನನಗೆ ಗೊತ್ತಿಲ್ಲ. ವಾದಿಯರ ಮದುವೆ 1980 ಕ್ಕೂ ಮೊದಲು ಅಗಿತ್ತೇ ಎಂದರೆ ನನಗೆ ಗೊತ್ತಿಲ್ಲ.

12. ದಾವಾ ಐಟಂ ನಂ 3 ನನ್ನ ತಾತ ಮುನಿವೆಂಕಟಪ್ಪನವರಿಗೆ ದಿಃ 19.08.1982 ರಲ್ಲಿ ಮಂಜೂರಾಗಿತ್ತು ಎಂದರೆ ನನಗೆ ಗೊತ್ತಿಲ್ಲ. 1982 ಕ್ಕೂ ಮೊದಲೇ ವಾದಿಯರಿಗೆ ಮದುವೆಯಾಗಿ ಅವರ ಗಂಡನ ಮನೆಯಲ್ಲಿ ಅವರು ವಾಸವಿದ್ದರು ಎಂದರೆ ನನಗೆ ಗೊತ್ತಿಲ್ಲ. ಪ್ರತಿವಾದಿಗೆ ಯಾವಾಗ ಮದುವೆಯಾಗಿತ್ತು ಎಂದು ನನಗೆ ಗೊತ್ತಿಲ್ಲ. ಪ್ರತಿವಾದಿಗೆ ಅಕೆಯ ತಂದೆ ದಿಃ 28.11.2003 ರಂದು ದಾನ ಪತ್ರವನ್ನು ದಾವಾ ಐಟಂ ನಂ 3 ಕ್ಕೆ ಸಂಬಂದಿಸಿದಂತೆ ಬರೆದುಕೊಟ್ಟಿದ್ದಾರೆಂದರೆ ನನಗೆ ಗೊತ್ತಿಲ್ಲ. ವಿಲ್ ನಾಮೆ ಮತ್ತು ದಾನ ಪತ್ರದ ಅಧಾರದ ಮೇಲೆ ಪ್ರತಿವಾದಿಯ ಹೆಸರಿಗೆ ಖಾತೆಗಳು ದಾವಾ ಐಟಂ ನಂ 2 ಮತ್ತು 3 ಕ್ಕೆ ಸಂಬಂದಿಸಿದಂತೆ ಅಗಿವೆಯೆಂದರೆ ನನಗೆ ಗೊತ್ತಿಲ್ಲ.

ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದರಿಂದ ಮುಂದೂಡಲಾಯಿತು.

ನನ್ನ ಉಕ್ತಲೇಖನದ ರೀತ್ಯಾ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ.ಹೆ.ಕೇ.ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು

ಚಿಂತಾಮಣಿ.